ಆಡಳಿತ ಮಂಡಲಿಯ ವಜಾಂದಿಟ್ಟು ಅನುಮೋದನೆ ತೆಗೆದುಕೊಂಡರೂ ಸರ್ಕಾರೀ ಆದೇಶದ ದಿನದಿಂದಲೇ ಆಳವಡಿಸಿಕೊಂಡು ಹಿಂದಿನ ಬಾಕಿಯನ್ನೆಲ್ಲಾ ನೌಕರರಿಗೆ ಕೊಡುತ್ತಿರುವುದು ನಿಜವೇ ;

ಆ) ಆದರೆ ಇದೇ ನೀತಿಯನ್ನು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಕೆ. ಎಸ್. ಆರ್. ಟಿ. ಸಿ. ಯ ನೌಕರರಿಗೆ ಅನುಸರಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಈ ರೀತಿ ದ್ವಂದ್ವ ನೀತಿಯನ್ನು ಅನುಸರಿಸುವ ಕೆ. ಎಸ್. ಆರ್. ಟಿ. ಸಿ. ಯ ಆಡಳಿತ ಮಂಡಲಿಯ ವಿರುದ್ಧ ಸರ್ಕಾರದವರು ತೆಗೆದುಕೊಳ್ಳುವ ನಿರ್ದಿಷ್ಟ ಕ್ರಮವೇನು ?

ಈ) ಹಾಗೆ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರೀ ಆಜ್ಞೆ ಹೊರಬಿದ್ದ ನಂತರ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡ ಕೆ. ಎಸ್. ಆರ್. ಟಿ. ಸಿ. ಸಂಸ್ಥೆಯ ನೌಕರರಿಗೆ ಅವರು ಮಾಡಿಸಿಕೊಂಡ ದಿನದಿಂದಲೇ ಮುಂಗಡ ವಾರ್ಷಿಕ ಬಡ್ತಿಯನ್ನು ಮಂಜೂರು ಮಾಡಲಾಗುವುದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).—

ಅ) ಸರ್ಕಾರವು ತನ್ನ ನೌಕರರಿಗೆ ತುಟ್ಟಿ ಭತ್ಯ ಮನೆ ಬಾಡಿಗೆ ಭತ್ಯ, ನಗರ ಭತ್ಯದ ದರಗಳನ್ನು ಪರಿಷ್ಕರಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೂಡ ಸರ್ಕಾರಿ ಆದೇಶದ ದಿನಾಂಕದಿಂದಲೇ ಯಾವುದೇ ವಿಳಂಬವಿಲ್ಲದೇ ತನ್ನ ನೌಕರರಿಗೆ ಕೈಗಾರಿಕಾ ಒಪ್ಪಂದದ ಪ್ರಕಾರ ನೀಡುತ್ತದೆ.

ಆ) ದಿನಾಂಕ ೧-೧೨-೮೫ ರಿಂದಲೇ ಸರ್ಕಾರಿ ಆಜ್ಞೆಯನ್ನು ಆಳವಡಿಸಿಕೊಂಡು ಸಂಸ್ಥೆಯು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ನೌಕರರಿಗೆ ಒಂದು ಮುಂಗಡ ವಾರ್ಷಿಕ ವೇತನ ಬಡ್ತಿಯನ್ನು ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದರೋಡೆ, ಲೂಟಿ ಇತ್ಯಾದಿ ಪ್ರಕರಣಗಳು ಹೆಚ್ಚಾಗುತ್ತಿರುವುದರ ಬಗ್ಗೆ ಹಾಗೂ ತಡೆಗಟ್ಟಲು ಕೈಗೊಂಡಿರುವ ಕ್ರಮಗಳು

೪೭೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ನಡೆದಿರುವ ಕೊಲೆ, ಲೂಟಿ ದರೋಡೆ ಕಳ್ಳತನ ಕೋವಂಂವಾರು ಘರ್ಷಣೆಗಳೆಷ್ಟು (ವಿವರಗಳನ್ನು ವರ್ಷವಾರು ಕೊಡುವುದು)

ಆ) ಈ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಗಮನಿಸಿ ಸರ್ಕಾರವು ಇವುಗಳನ್ನು ಕಂಡು ಹಿಡಿಯಲು ಹಾಗೂ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎಲ್' ಜಾಲಪ್ಪ (ಮಾನ್ಯ ಗೃಹ ಮಂತ್ರಿಗಳು).—

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಕೊಲೆ ಲೂಟಿ, ದರೋಡೆ ಕಳ್ಳತನ, ಕೋಮುವಾರು ಘರ್ಷಣೆಗಳು ಈ ಕೆಳಕಂಡಂತೆ ವರದಿಯಾಗಿವೆ.

	ಕೊಲೆ	ಲೂಟಿ	ದರೋಡೆ	ಕಳ್ಳತನ	ಕೋಮುವಾರು ಘರ್ಷಣೆ
೧೯೮೫	೧೦೦೨	೪೬೩	೧೫೪	೨೧,೯೮೪	೫೧
೧೯೮೬	೧೦೨೯	೫೩೯	೨೨೨	೨೧,೪೩೮	೫೯೫
೧೯೮೭	೧೧೧೦	೫೪೩	೧೬೭	೨೧,೨೧೦	೧೩೦

ಆ) ದರೋಡೆ ಲೂಟಿ, ಕಳ್ಳತನ, ಇವುಗಳನ್ನು ತಡೆಗಟ್ಟಲು ಪೋಲೀಸ್ ಇಲಾಖೆ ವಿಶೇಷ ಕ್ರಮಗಳನ್ನು ತೆಗೆದುಕೊಂಡಿದೆ, ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಣೆಗಾಗಿ ಇಲಾಖೆಯಲ್ಲಿ ರುವ ಸಿಬ್ಬಂದಿಯ ಕೊರತೆಯ ನಡುವೆಯೂ ಹೆಚ್ಚಿನ ರೀತಿಯಲ್ಲಿ ನಗರಗಳು ಅವುಗಳ ಸುತ್ತ ಮುತ್ತ ಹಾಗೂ ಹೆದ್ದಾರಿ ಇನ್ನಿತರ ಆಯಕಟ್ಟಿನ ಪ್ರದೇಶಗಳಲ್ಲಿ ರಾತ್ರಿ ಗಸ್ತುಗಳನ್ನು ಏರ್ಪಡಿಸ ಲಾಗಿದೆ. ದರೋಡೆ ತಡೆಗಟ್ಟಲು ದರೋಡೆ ನಿರೋಧ ದಳಗಳನ್ನು ಎಲ್ಲಾ ಜಿಲ್ಲೆಗಳಲ್ಲೂ, ನಗರಗಳಲ್ಲೂ, ನಿಯೋಜಿಸಲಾಗಿದೆ. ದರೋಗಡೆಳನ್ನು ಪತ್ತೆಹಚ್ಚಲು ವಿಶೇಷ ತನಿಖಾ ದಳಗಳನ್ನು ಹಾವಳಿಗೀಡಾದ ಪ್ರದೇಶಗಳಲ್ಲಿ ರಚಿಸಲಾಗಿದೆ. ರಾತ್ರಿ ವೇಳೆ ತೀವ್ರ ಗಸ್ತು ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಉಸ್ತುವಾರಿ ಮಾಡಲು ಇಲಾಖೆಯ ಹಿರಿಯ ಅಧಿಕಾರಿಗಳಾದ ಪೋಲೀಸ್ ಕಮೀಷನರ್ ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ಗಳು, ಪೋಲೀಸ್ ಸೂಪರಿಂಟೆಂಡೆಂಟ್‌ರವರುಗಳು ಮತ್ತು ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಪೋಲೀಸ್ ಅಧಿಕಾರಿಗಳನ್ನೂ ನಿಯೋಜಿಸಲಾಗಿದೆ. ಕೋಮುವಾರು ಗಲಭೆಗಳನ್ನು ತಪ್ಪಿಸಲು ಕೋಮುವಾರು ಗಲಭೆಗಳಿಗೆ ಅವಕಾಶವಾಗುವ ಸಂದರ್ಭ ಮತ್ತು ವ್ಯಕ್ತಿಗಳ ಬಗ್ಗೆ ವಿಶೇಷ ಮಾಹಿತಿಯನ್ನು ಸಂಗ್ರಹಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಮಂತೀಯ ಸೌಹಾರ್ದತೆ, ಕಾಪಾಡುವ ದೃಷ್ಟಿ ಯಿಂದ ಶಾಂತಿ ಮತ್ತು ಸಮನ್ವಯ ಸಮಿತಿಗಳನ್ನು ಠಾಣಾಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ನಿಯೋಜಿಸಿದ್ದು. ಆದಷ್ಟು ಸ್ಥಳೀಯರ ಸಹಕಾರದಿಂದ ಮತೀಯ ವೈಶಮ್ಯ ಹದ್ದುಮೀರಿ ಹೋಗ ದಂತೆ ಮತ್ತು ಅನ್ಯೋನ್ಯತೆಯಿಂ ಜೀವನವನ್ನು ಜನರು ಸಾಗಿಸುವಂತೆ ಮಾಡಲಾಗುತ್ತಿದೆ. ಹಾಗೂ ಹತೋಟಿ ತಪ್ಪಿಹೋಗುವಂತಹ ಪರಿಸ್ಥಿತಿಯಲ್ಲಿ ಉಗ್ರ ಕ್ರಮಗಳಾದ ಪ್ರತಿಬಂಧಕ ಆಜ್ಞೆ ಹಾಕುವುದು ಬಲಪ್ರಯೋಗ ಮಾಡಿ ಗುಂಪನ್ನು ಚದುರಿಸುವುದು, ಇತ್ಯಾದಿ ಕ್ರಮಗಳನ್ನೂ ತೆಗೆದುಕೊಳ್ಳ ಲಾಗುತ್ತಿದೆ.

ವಿಚಾರಣೆಯಿಲ್ಲದೆ ಸಸ್ಪೆಂಡ್ ಆಗಿರುವ ಕೆ. ಎಸ್. ಆರ್. ಟಿ.ಸಿ. ನೌಕರರು

೪೨೬. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ. ಎಸ್. ಆರ್. ಟಿ. ಸಿ. ಯಲ್ಲಿ ವಿಚಾರಣೆಯಿಲ್ಲದೆ ೬ ತಿಂಗಳುಗಳಿಗಿಂತ ಹೆಚ್ಚಾಗಿ ಅಮಾನತ್ತಿನಲ್ಲಿಡಲ್ಪಟ್ಟಿರುವನೌಕರರ ಸಂಖ್ಯೆ ಎಷ್ಟು ಯಾವ ಯಾವ ವರ್ಗಗಳಲ್ಲಿ ಎಷ್ಟು ನೌಕರರಿದ್ದಾರೆ) ಎಂಬ ವಿವರಗಳನ್ನು ನೀಡುವುದು.

ಆ) ಆರು ತಿಂಗಳುಗಳಿಗಿಂತ ಹೆಚ್ಚಾಗಿ ಅಮಾನತ್ತಿನಲ್ಲಿಡಕೂಡದೆಂದು ಸರ್ಕಾರದ ಆದೇಶವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದವರು ಪಾಲಿಸುತ್ತಿರುವರೆ ;

ಇ) ಹಾಗಿದ್ದಲ್ಲಿ, ೬ ತಿಂಗಳುಗಳಿಗಿಂತ ಹೆಚ್ಚಾಗಿ ಅಮಾನತ್ತಿನಲ್ಲಿಟ್ಟಿರುವ ನೌಕರರೆಲ್ಲರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆಜ್ಞೆ ಮಾಡಲಾಗುವುದೆ ?